


ಟ್ರಾಫಿಕ್ ಜಾಮ್ ನಡುವೆ ಎತ್ತ ಹೋಗಲೂ ದಾರಿ ಕಾಣದೆ ಕಂಗಾಲಾಗಿ ನಿಂತಿರುವ ದ್ವಿಚಕ್ರ ವಾಹನ ಸವಾರ

ಗೋಳಾದರೆ, ಪಾದಚಾರಿಗಳದು ಮತ್ತೊಂದು ಬಗೆಯ ಸಂಕಷ್ಟ. ಕೆಲವು ಸಂದರ್ಭಗಳಲ್ಲಂತೂ ವಾಹನಗಳು ಪಾದಚಾರಿ ರಸ್ತೆಯ ಮೇಲೆಯೇ ಸಂಚರಿಸಿ, ನಡೆದಾಡುವವರು ಜೀವವನ್ನು ಕೈಯಲ್ಲಿಟ್ಟುಕೊಂಡೇ ಸಂಚರಿಸಬೇಕಾಗುತ್ತದೆ. ವಾಹನ ದಟ್ಟಣೆಯ ಸ್ಥಳಗಳಲ್ಲಿ ರಸ್ತೆಗಳನ್ನು ದಾಟಲಿಕ್ಕೆ ಕಸರತ್ತು ನಡೆಸಬೇಕಾಗುತ್ತದೆ. ಕೆಲವು ಸ್ಥಳಗಳಲ್ಲಂತೂ ವಾಹನಗಳ ನಡುವೆಯೇ ರಸ್ತೆ ದಾಟಬೇಕಾದ ಪರಿಸ್ಥಿತಿಯಿದೆ. ಐಬಿಎಂನ 'ಗ್ಲೋಬಲ್ ಕಮ್ಯೂಟರ್ ಪೇನ್ ಸರ್ವೆ'ಯ ಪ್ರಕಾರ—ಪಾದಚಾರಿಗಳನ್ನು ಅತ್ಯಂತ ಕೆಟ್ಟದಾಗಿ ನಡೆಸಿಕೊಳ್ಳುವ ನಗರಗಳ ಪೈಕಿ ಬೆಂಗಳೂರು ವಿಶ್ವದಲ್ಲೇ 6ನೇ ಸ್ಥಾನದಲ್ಲಿದೆ. ಬೆಂಗಳೂರಿನ ನಂತರ ದೆಹಲಿಯಿದೆ ಎನ್ನುವುದು ಗಮನಾರ್ಹ.

## ನೆಮ್ಮದಿ ನಷ್ಟ - ಅಸಹನೆಯ ಕಿಡಿ

ನಗರಪ್ರದೇಶಗಳಲ್ಲಿನ ಬದುಕು ಅನೇಕರಲ್ಲಿ ಅಸಹನೆ ಹುಟ್ಟಿಸಲು ಪ್ರಮುಖ ಕಾರಣ ಟ್ರಾಫಿಕ್ ಜಾಮ್. ಈ ವಾಹನ ಸಂದಣಿ ಪ್ರತಿನಿತ್ಯ ಅನುಭವಿಸಲೇಬೇಕಾದ ನರಕವಾಗಿ ಪರಿಣಮಿಸಿ, ಮಾನಸಿಕ ನೆಮ್ಮದಿಯನ್ನೇ ಕಸಿದುಕೊಳ್ಳುತ್ತದೆ. ಕಚೇರಿಗೆ ಸಮಯ ಮೀರುತ್ತಿದ್ದರೂ, ಸಿಗ್ನಲ್‌ಗಳಲ್ಲಿ ಹಸಿರುದೀಪವನ್ನು ನಿರೀಕ್ಷಿಸುವುದು ನಮ್ಮ ಸಹನೆಗೆ ಬಹುದೊಡ್ಡ ಸವಾಲಾಗಿ ಪರಿಣಮಿಸುತ್ತದೆ. ಪ್ರತಿದಿನವೂ ಇದೇ ಗೋಳಾದಾಗ ಇಡೀ ನಗರವೇ ಒಂದು ಚಕ್ರವ್ಯೂಹವಾಗಿ, ನಾವೆಲ್ಲ ಅಲ್ಲಿ ಸಿಕ್ಕ ಮಿಕಗಳಾಗಿ ಭಾಸವಾಗತೊಡಗುತ್ತದೆ.

ಕವಿ ಜಿ.ಎಸ್. ಶಿವರುದ್ರಪ್ಪನವರ 'ಮುಂಬೈ ಜಾತಕ' ಕವಿತೆ ನಗರಗಳಲ್ಲಿ ಬದುಕನ್ನು ಇದು ನಮ್ಮದೇ ಬದುಕು ಎನ್ನುವಷ್ಟು ಚಿತ್ರವತ್ತಾಗಿ ಹಿಡಿದಿಟ್ಟಿದೆ. ಮಹಾನಗರದಲ್ಲಿನ 'ಜೀವನ'ವನ್ನು ಕವಿತೆ ವಿಶ್ಲೇಷಿಸುವುದು ಹೀಗೆ: 'ಈ ಲಕ್ಷ ದಾರಿಗಳ ಚದುರಂಗದಾಟದಲಿ, ನೂರು / ಬೆಳಕಿನ ಕೆಳಗೆ ಯಾರದೋ ಕೈಗೊಂಬೆಯಾಗಿ / ಮುಂದುವರೆಯುವುದು. ಏಳುವುದು, ಬಟ್ಟೆಯಲಿ / ಮೈ ತುರುಕಿ ಓಡುವುದು; ರೈಲನೋ ಬಸ್ಸನೋ / ಹಿಡಿಯುವುದು; ಸಾಯಂಕಾಲ ಸೋತು ಸುಸ್ತಾಗಿ / ರೆಪ್ಪೆಯ ಮೇಲೆ ಹತ್ತು ಮಣ ಆಯಾಸವನು ಹೊತ್ತು / ಹನ್ನೊಂದು ಘಂಟೆ ಹೊಡೆದಾಗ ಮನೆಯಲ್ಲಿ / ಕಾದೂ ಕಾದೂ ತೂಕಡಿಸಿ ಮಂಕಾದ ಮಡದಿಯನು / ಎಚ್ಚರಿಸುವುದು; ತಣ್ಣಗೆ ಕೊರೆವ ಕೂಳುಂಡು / ಬಾಡಿಗೆ ಮನೆಯ ನೆರಳಿನ ಕೆಳಗೆ, ಮತ್ತೆ / ಸಾವಿರ ಗಾಲಿಯುಜ್ಜುವ ಕನಸು ಬಂಡಿಯ ಕೆಳಗೆ / ಹಾಸುಗಂಬಿಯ ಹಾಗೆ ತತ್ತರಿಸುತ್ತ ಮಲಗುವುದು.' ಹೌದಲ್ಲವೇ, ನಾವೇ ಸೃಷ್ಟಿಸಿಕೊಂಡ ಒತ್ತಡಗಳಿಂದಾಗಿ ನಮ್ಮ ಬದುಕು ಸಾವಿರ ಗಾಲಿಯುಜ್ಜುವ ಬಂಡಿಗೆ ಒಡ್ಡಿಕೊಂಡ ಹಾಸುಗಂಬಿಯ ಹಾಗೆ ತತ್ತರಿಸುತ್ತಿಲ್ಲವೇ?

ಬದಲಾದ ಸಾಮಾಜಿಕ ಸಂದರ್ಭದಲ್ಲಿ ನಗರಗಳಲ್ಲಿ ದುಡಿಯುವುದು ಅನಿವಾರ್ಯ. ಆದರೆ, ದುಡಿಮೆಯ ಜೊತೆಗೆ ಸಹನೆಯ ಪಾಠವನ್ನೂ ನಾವು ರೂಢಿಸಿಕೊಳ್ಳಬೇಕಾಗುತ್ತದೆ. ನಗರದ ಜೀವನ ಸೃಷ್ಟಿಸುವ ಅನಿವಾರ್ಯ ಒತ್ತಡಗಳನ್ನು ಸಹಿಸಿಕೊಳ್ಳುವ ಧಾರಣಾಶಕ್ತಿಯನ್ನು ನಮ್ಮದಾಗಿಸಿಕೊಳ್ಳದೆ ಹೋದರೆ ಜೀವನ ಅಸಹನೀಯವೆನ್ನಿಸತೊಡಗುತ್ತದೆ.

ಪ್ರಕಾಶ್ ಎನ್ನುವ ಅರವತ್ತರ ಸಮೀಪದ ಹಿರಿಯೊಬ್ಬರು ಇದ್ದಕ್ಕಿದ್ದಂತೆ ಪಾರ್ಶ್ವವಾಯುವಿಗೆ ಒಳಗಾದರು. ಶೀಘ್ರ ಹಾಗೂ ಗುಣಮಟ್ಟದ ಚಿಕಿತ್ಸೆಯಿಂದ ಅವರು ಅಪಾಯದಿಂದ ಪಾರಾದರು. ರಕ್ತದೊತ್ತಡವನ್ನು ಹತೋಟಿಯಲ್ಲಿಟ್ಟುಕೊಂಡಿದ್ದರೂ ದುಶ್ಚಟಗಳಿಲ್ಲದಿದ್ದರೂ ಪಾರ್ಶ್ವವಾಯುವಿಗೆ ಒಳಗಾದದ್ದು ಅವರಿಗೆ ಅಚ್ಚರಿ ತಂದಿತು. ತಮ್ಮ

